# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1492 |
| 2. ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| 3. ಉತ್ತರಿಸಬೇಕಾದ ದಿನಾಂಕ | : | 20.03.2025 |
| 4. ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ. ಸಂ. | ವಿಷಯ | ಉತ್ತರ |
|---|---|---|
| ಅ) | ನಮ್ಮ ಮೆಟ್ರೋ ರೈಲು ಯೋಜನೆಯು ಬೆಂಗಳೂರು ನಗರದ ಸಂಚಾರ ವ್ಯವಸ್ಥೆಯ ಜೀವನಾಡಿಯಾಗಿದ್ದು, 9 ಲಕ್ಷಕ್ಕೂ ಹೆಚ್ಚಿನ ಜನರು ಪ್ರತಿ ನಿತ್ಯ ಮೆಟ್ರೋ ಸೇವೆಯನ್ನು ಬಳಸುತ್ತಿರುವುದರಿಂದ ಇಲ್ಲಿಯವರೆಗೆ ಎಷ್ಟು ಕಿ.ಮೀ. ಉದ್ದದ ಸಂಚಾರಿ ಮಾರ್ಗ ಪೂರ್ಣಗೊಂಡಿದೆ; | ಬೆಂಗಳೂರು ಮೆಟ್ರೋ ರೈಲು ನಿಗಮವು ಪ್ರಸ್ತುತ 76.95 ಕಿಲೋಮೀಟರ್‌ಗಳ ಕಾರ್ಯಾಚರಣೆ ಜಾಲವನ್ನು ಹೊಂದಿದೆ. |
| ಆ) | 2025-26ನೇ ಸಾಲಿನಲ್ಲಿ ಸದರಿ ಸಂಸ್ಥೆಯಿಂದ ಎಷ್ಟು ಕಿ.ಮೀ. ಉದ್ದದ ಸಂಚಾರಿ ಮಾರ್ಗವನ್ನು ನಿರ್ಮಿಸಲು ಉದ್ದೇಶಿಸಿದೆ; ಇದಕ್ಕಾಗಿ ಎಷ್ಟು ಅನುದಾನ ಮೀಸಲಿಡಲಾಗಿದೆ. | ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತವು (BMRCL) 2025-26ನೇ ಸಾಲಿನಲ್ಲಿ ಈ ಕೆಳಕಂಡ ಮಾರ್ಗಗಳನ್ನು ಸಾರ್ವಜನಿಕ ಸೇವೆಗೆ ಒದಗಿಸಲು ಯೋಜಿಸಲಾಗಿದೆ.<br><br>➢ ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರದವರೆಗೆ 19.15 ಕಿಮೀ ಉದ್ದದ ಹಳದಿ ಮಾರ್ಗದಲ್ಲಿ 16 ನಿಲ್ದಾಣಗಳನ್ನೊಳಗೊಂಡು ಜುಲೈ-2025ರಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ.<br><br>➢ ಕಾಳೇನ ಅಗ್ರಹಾರದಿಂದ ತಾವರೆ-ಕೆರೆಯವರೆಗೆ (ಬನ್ನೇರುಘಟ್ಟ ರಸ್ತೆ, ಮೀನಾಕ್ಷಿ ದೇವಸ್ಥಾನದ ಹತ್ತಿರದವರೆಗೆ) 7.5 ಕಿ.ಮೀ ಉದ್ದದ ಸಂಪರ್ಕವನ್ನು 5 (ಐದು) ನಿಲ್ದಾಣಗಳೊಂದಿಗೆ ಡಿಸೆಂಬರ್-2025ರಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ.<br><br>ಕರ್ನಾಟಕ ಸರ್ಕಾರವು (GOK) 2024-25ನೇ ಸಾಲಿನ ಆರ್ಥಿಕ ವರ್ಷದಲ್ಲಿ ಹಂಚಿಕೆ ಮಾಡಿರುವ ಅನುದಾನದಲ್ಲಿ ನಡೆಯುತ್ತಿರುವ ಯೋಜನೆಗಳಿಗೆ ರೂ.872.50 ಕೋಟಿಗಳನ್ನು ಮೀಸಲಿಡಲಾಗಿದೆ. |

| | | |
|---|---|---|
| ಇ) | ಇತ್ತೀಚಿನ ದಿನಗಳಲ್ಲಿ ಏಕಾಏಕಿ ದರವನ್ನು 45%-50%ಕ್ಕೆ ಏರಿಕೆ ಮಾಡಿರುವುದರಿಂದ ಈ ದರಗಳನ್ನು ಕಡಿಮೆಗೊಳಿಸಲು ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ? | ಬೆಂಗಳೂರು ಮೆಟ್ರೋ ರೈಲು ನಿಗಮದಲ್ಲಿ ದರವನ್ನು ಜೂನ್-2017 ರಲ್ಲಿ ಕನಿಷ್ಠ ರೂ.10 ಮತ್ತು ಗರಿಷ್ಠ ರೂ.60 ರಂತೆ ನಿಗದಿಪಡಿಸಲಾಗಿತ್ತು. 2017 ರಲ್ಲಿ ದರವನ್ನು ನಿಗದಿಪಡಿಸಿದಾಗ, ಕಾರ್ಯಾಚರಣೆಯ ನೆಟ್ ವರ್ಕ್ ನ ಉದ್ದ 42.30 ಕಿ.ಮೀ. ಆಗಿತ್ತು, ಅದು ಈಗ 2024 ರಲ್ಲಿ 76.95 ಕಿ.ಮೀ.ಗೆ ವಿಸ್ತಾರಗೊಂಡಿದೆ.<br><br>ಮೆಟ್ರೋ ನಿರ್ವಹಣಾ ವೆಚ್ಚಗಳು ಅಂದರೆ, ಸಿಬ್ಬಂದಿ ವೇತನ, ವಿದ್ಯುತ್ ಶಕ್ತಿಯ ವೆಚ್ಚ, ದುರಸ್ತಿ ಮತ್ತು ನಿರ್ವಹಣೆ ಮತ್ತು ಇತರೆ ಆಡಳಿತ ವೆಚ್ಚಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿವೆ. ಇದು ಕಾರ್ಯಾಚರಣೆ ಮತ್ತು ನಿರ್ವಹಣೆ ಮೇಲೆ ಪರಿಣಾಮ ಬೀರುತ್ತಿದೆ. ಸಾರ್ವಜನಿಕರಿಗೆ ತೊಂದರೆ-ಮುಕ್ತ, ಗುಣಮಟ್ಟದ ಸೇವೆಯನ್ನು ಒದಗಿಸುವುದು ಅಗತ್ಯವಿದೆ. ಇದಲ್ಲದೆ ಬೆಂಗಳೂರು ಮೆಟ್ರೋ ರೈಲು ನಿಗಮವು ಪಡೆದಿರುವ ಬಾಹ್ಯ ಸಾಲದ ಮೇಲಿನ ಬಡ್ಡಿಯನ್ನು Japan International Cooperation Agency (JICA), Alternative für Deutschland (AFD), Asian Development Bank (ADB), European Investment Bank (EIB), Asian Infrastructure Investment Bank (AIIB) ಮತ್ತು Kreditanstalt für Wiederaufbau (KFW) ಸಂಸ್ಥೆಗಳಿಗೆ, ವಿನಿಮಯ ದರದ ವ್ಯತ್ಯಾಸಗಳನ್ನು ಒಳಗೊಂಡಂತೆ ಚಾಲ್ತಿಯಲ್ಲಿರುವ ಬಡ್ಡಿ ದರದಲ್ಲಿ ಪಾವತಿಸಬೇಕಾಗಿರುತ್ತದೆ.<br><br>ಡೆಲ್ಲಿ ಮೆಟ್ರೋ ರೈಲು ನಿಗಮವು 4 ದರ ನಿಗಧಿ ಸಮಿತಿ (Fare Fixation Committee) ಗಳು ಅಳವಡಿಸಿಕೊಂಡ ಸೂತ್ರದ ಆಧಾರದ ಮೇಲೆ, ಬೆಂಗಳೂರು ಮೆಟ್ರೋ ರೈಲು ನಿಗಮವು, ಸಿಬ್ಬಂದಿ ವೆಚ್ಚ, ಪ್ರತಿ ಯೂನಿಟ್‌ನ ವಿದ್ಯುತ್ ಶಕ್ತಿಯ ವೆಚ್ಚ ಮತ್ತು ಪ್ರತಿ ಕಿಲೋಮೀಟರ್ ನಿರ್ವಹಣೆ ಮತ್ತು ಇತರ ವೆಚ್ಚಗಳನ್ನು Consumer Price Index (CPI) ಯಲ್ಲಿನ ಬದಲಾವಣೆಗಳ ಆಧಾರದ ಮೇಲೆ ದರ ಹೆಚ್ಚಳವನ್ನು ರೂಪಿಸಲಾಗಿದೆ.<br><br>The Metro Railways (Operation and Maintenance) Act-2002 ಸೆಕ್ಷನ್-34, ಸಬ್ ಸೆಕ್ಷನ್-1 ರನ್ವಯ Fare Fixation Committee (FFC) ಯನ್ನು ರಚಿಸಲು ಅವಕಾಶ ಕಲ್ಪಿಸಿದೆ. |

ಸದರಿ ಕಾಯ್ದೆಯ ಸೆಕ್ಷನ್-37 ಅನ್ವಯ FFC ಶಿಫಾರಸ್ಸುಗಳು ಮೆಟ್ರೋ ರೈಲ್ವೆ ಆಡಳಿತದ ಮೇಲೆ ಬದ್ಧವಾಗಿರುತ್ತದೆ.

ಅದರಂತೆ, ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ತಲಾ ಒಬ್ಬಬ್ಬರು ಸದಸ್ಯರುಗಳನ್ನು ನಾಮ ನಿರ್ದೇಶನಗೊಂಡು ಸದರಿ ಸಮಿತಿಯನ್ನು ನಿವೃತ್ತಿ ಉಚ್ಚ ನ್ಯಾಯಾಲಯದ ನ್ಯಾಯಾದೀಶರ ಅಧ್ಯಕ್ಷತೆಯಲ್ಲಿ ವಿಧಿ ವಿಧಾನಗಳೊಂದಿಗೆ ದರ ನಿಗದಿಯನ್ನು ವೈಜ್ಞಾನಿಕವಾಗಿ ಶಿಫಾರಸ್ಸನ್ನು ರೂಪಿಸಿರುತ್ತಾರೆ.

ಬೆಂಗಳೂರು ಮೆಟ್ರೋ ರೈಲು ನಿಗಮದ ದರದ ಹೆಚ್ಚಳದ ವಿವರಗಳು ಈ ಕೆಳಕಂಡಂತಿವೆ:

| ವಿವರಗಳು | ಆಧಾರ | ಸೂಚ್ಯಂಕ (CPI Index) | % ಬದಲಾವಣೆ | ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚದ ಸಂಯೋಜನೆ | % ದರ ಹೆಚ್ಚಳ |
|---|---|---|---|---|---|
| ಸಿಬ್ಬಂದಿ ವೆಚ್ಚ | ಮಾರ್ಚ್-2017 ರಂತೆ CPI | 130.9 | 42% | 61% | 25.58% |
| | ಮಾರ್ಚ್ 2024 ರಂತೆ CPI | 185.8 | | | |
| ವಿಧ್ಯುತ್ ಶಕ್ತಿ ವೆಚ್ಚ | ಮಾರ್ಚ್ 2017 ರಲ್ಲಿ ವೆಚ್ಚ/ ಯೂನಿಟ್ | 5.19 | 34% | 19% | 6.41% |
| | ಮಾರ್ಚ್ 2024 ರಲ್ಲಿ ವೆಚ್ಚ/ ಯೂನಿಟ್ | 6.94 | | | |
| ನಿರ್ವಹಣೆ ಮತ್ತು ಆಡಳಿತ ವೆಚ್ಚ | ಮಾರ್ಚ್ 2017 ರಲ್ಲಿ ರೂ / ಕೋಟಿ | 0.38 | 366% | 20% | 73.16% |
| | ಮಾರ್ಚ್ 2024 ರಲ್ಲಿ ರೂ/ ಕೋಟಿ | 1.77 | | | |
| **ಒಟ್ಟು** | | | | **100%** | **105.15%** |

| | | |
|---|---|---|
| | | ಅಸ್ತಿತ್ವದಲ್ಲಿರುವ ದರದ ಮೇಲಿನ ಹೆಚ್ಚಳವನ್ನು 14.02%ಗಳಷ್ಟು ಪ್ರತಿ ವರ್ಷದಂತೆ 7.50 ವರ್ಷಗಳ ಅವಧಿಯಲ್ಲಿ 105.15% ರಷ್ಟು ಆಗಿರುತ್ತದೆ.<br><br>ಆದಾಗ್ಯೂ, ಪ್ರಯಾಣ ದರ ಪರಿಷ್ಕರಣೆಯಿಂದ ಪ್ರಯಾಣಿಕರ ಮೇಲಾಗುವ ಪರಿಣಾಮವನ್ನು ಕಡಿಮೆ ಮಾಡುವ ಉದ್ದೇಶದಿಂದ ಮತ್ತು ಬಿಎಂಆರ್‌ಸಿಎಲ್‌ನ ಆರ್ಥಿಕ ಸುಸ್ಥಿರತೆ ಮತ್ತು ಸಾಮಾನ್ಯ ಜನರಿಗೆ ಪ್ರಯಾಣ ದರದ ಕೈಗೆಟುಕುವಿಕೆ ಎಂಬ ಅವಳಿ ಉದ್ದೇಶಗಳನ್ನು ಪರಿಗಣಿಸಿ 105.15% ಹೆಚ್ಚಳ (14.02% ಹೆಚ್ಚಳ/ವರ್ಷ)ಕ್ಕೆ ಬದಲಾಗಿ, ಸರಾಸರಿ 51.55% (6.87% ಹೆಚ್ಚಳ/ವರ್ಷ) ಹೆಚ್ಚಳದೊಂದಿಗೆ ಪ್ರಯಾಣ ದರ ರಚನೆಯನ್ನು Fare Fixation Committee (FFC) ವೈಜ್ಞಾನಿಕವಾಗಿ ಶಿಫಾರಸ್ಸು ಮಾಡಿದೆ.<br><br>ಆದ್ದರಿಂದ, ದಿನಾಂಕ:09-02-2025 ರಂದು ಮೆಟ್ರೋ ಪ್ರಯಾಣ ದರವು 81% ದಿಂದ 100% ಹೆಚ್ಚಳವಾಗಿತ್ತು ಈ ಬಗ್ಗೆ ಮರು ಪರಿಶೀಲಿಸಿ ದಿನಾಂಕ:14.02.2025 ರಿಂದ ಗರಿಷ್ಠ ದರದ ಹೆಚ್ಚಳವನ್ನು 71.43% ಗೆ ಇಳಿಕೆ ಮಾಡಲಾಗಿದೆ. |

ಕಡತ ಸಂಖ್ಯೆ: ನಅಇ 67 ಪಿ.ಆರ್.ಜೆ 2025

**(ಡಿ. ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ